**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 3070/2014 CW-18 PW-12**

**ಸಾಕ್ಷಿಯನ್ನು ದಿಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಸವಿತ |
| ಗಂಡನ ಹೆಸರುಃ | ನರಸಿಂಹೇಗೌಡ |
| ವಯಸ್ಸುಃ | 50 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಆರೋಸೋಮನಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಮ್ಮ ಗ್ರಾಮದ ಮಂಜಮ್ಮ ರವರು ನಮ್ಮ ಮನೆಯ ಬಳಿ ಬಂದು ಮೈಕ್ರೋ ಇನ್ಸೂರೆನ್ಸ್ ಯೋಜನೆ ಬಂದಿದ್ದು, ಗ್ರಾಮೀಣ ಕೂಲಿ ಕಾರ್ಮಿಕರಿಗೆ ಮತ್ತು ಬಡ ರೈತರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿರುತ್ತಾರೆ. ನಾನು ಏಜೆಂಟ್ ಆಗಿರುವುದಾಗಿ ತಿಳಿಸಿದರು. ಈ ಸಂಬಂಧ 2008 ರಲ್ಲಿ 2 ಫೋಟೋ ಮತ್ತು ದಾಖಲಾತಿಗಳನ್ನು ಪಡೆದಿರುತ್ತಾರೆ. ತಿಂಗಳಿಗೆ ರೂ 100/- ಕಟ್ಟುವುದಾಗಿ ತಿಳಿಸಿದರು. ನನಗೆ ನೀಡಿದ್ದ ಪಾಲಿಸಿ ಸಂಖ್ಯೆ 3735 ಆಗಿದೆ. ನಂತರ ನನಗೆ ಬಾಂಡ್ ನೀಡಿರುತ್ತಾರೆ. ನಾನು 2008 ರಿಂದ 2013 ರವರೆಗೆ ತಿಂಗಳಿಗೆ 100 ರಂತೆ ಕಟ್ಟಿರುತ್ತೇನೆ. ಅದನ್ನು ಮಂಜಮ್ಮ ರವರಿಗೆ ನಿಡಿರುತ್ತೇನೆ. ಸಮನ್ವಯ ಹೆಲ್ತ್ ಎಜುಕೇಶನ್ ನ ಚಿದಾನಂದ್ ರವರಿಗೆ ಕಟ್ಟಿರುತ್ತಾರೆ. ನಂತರ ಅದನ್ನು ಬಾಳಿಗೊಂದು ಗುರಿ ಸಂಸ್ಥೆಯವರು ನಡೆಸಿಕೊಂಡು ಹೋಗಿರುತ್ತಾರೆ. ಅಲ್ಲದೇ ಸಂತೋಷ ರವರ ಉಸ್ತುವಾರಿಯಲ್ಲಿತ್ತು. ನಾನು ಮಂಜಮ್ಮನ ಜೊತೆ ಸದರಿ ಬಾಳಿಗೊಂದು ಗುರಿ ಕಛೇರಿಗೆ ಹೋಗಿರುತ್ತೇನೆ. ಅಲ್ಲಿ ಸಂತೋಷ್ ರವರು ಇದ್ದು ಹಣವನ್ನು ಮೈಸೂರಿನ ಕಛೇರಿಗೆ ಪಾವತಿಸುತ್ತಿದ್ದರು. ನಂತರ ಹಣ ಪಾವತಿಸದೇ ಇದ್ದ ಬಗ್ಗೆ ತಿಳಿದು ಮಂಜಮ್ಮ ರವರನ್ನು ಸಂಪರ್ಕಿಸಿದಾಗ ಯಾವುದೇ ತೊಂದರೆಯಾಗುವುದಿಲ್ಲ ಕಟ್ಟಿ ಎಂದು ತಿಳಿಸಿದ್ದರು. ನಂತರ ಮೈಸೂರಿನ ಕಛೇರಿಗೆ ಹೋಗಿ ನನ್ನ ಯಜಮಾನರು ವಿಚಾರಿಸಿದಾಗ

ಮುಖ್ಯ ಕಛೇರಿಯಲ್ಲಿ ರೂ. 4,200/- ಮಾತ್ರ ಪಾವತಿಯಾಗಿದ್ದು ರೂ. 5,400/- ಪಾವತಿಯಾಗದಿರುವುದು ಕಂಡುಬಂದಿರುತ್ತದೆ. ರೂ. 5,400/- ಹಣವನ್ನು ಪಾವತಿಸದೇ ವಂಚನೆ ಮಾಡಿರುತ್ತಾರೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತಾರೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ**

ಮಂಜಮ್ಮ ನನಗೆ ರಶೀದಿಯನ್ನು ನೀಡಿದ್ದಾರೆ. ಸದರಿ ರಶೀದಿಯನ್ನು ಪೋಲೀಸರಿಗೆ ನೀಡಿದ್ದೇನೆ. ನಾನು ಪೋಲೀಸರಿಗೆ ಯಾವುದೇ ರಶೀದಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನೇರವಾಗಿ ಅರೋಪಿತರಿಗೆ ಹಣ ನೀಡಿಲ್ಲ ಎಂದರೆ ಸರಿ. ನಾನು ಮಂಜಮ್ಮ ರವರ ವಿರುದ್ಧ ಯಾವುದೇ ದೂರು ನೀಡಿಲ್ಲ. ನಾನು ಮಂಜಮ್ಮ ಸೇರಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜಮ್ಮ ರವರು ನನ್ನಿಂದ ಪಡೆದ ಹಣವನ್ನು ಆರೋಪಿ ಸಂಸ್ಥೆಗೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**